**ಅಸಲು ದಾವ ಸಂಖ್ಯೆಃ 400/2018**

**ಡಿ.ಡಬ್ಲೂ -1**

**ದಿಃ14-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ MTH ರವರಿಂದಃ-**

1. ನಿಪಿ-1 ರಿಂದ ನಿಪಿ-4 ರವರೆಗಿನ ದಾಖಲೆಗಳು ನನ್ನ ಬಳಿ ಇದ್ದವು ಹಾಗೂ ಅವುಗಳನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ-1 ರಿಂದ ನಿಡಿ-6 ರವರೆಗಿನ ದಾಖಲೆಗಳು ಸಹ ನನ್ನ ಬಳಿ ಇದ್ದವು ಹಾಗೂ ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗಳು ನನ್ನ ತಂದೆಯವರು ಮರಣ ಹೊಂದಿದ ನಂತರ ನನ್ನ ಬಳಿ ಇದ್ದವು ಆದರೆ ನಾನು ಅವುಗಳನ್ನು ಓದಿ ನೋಡಿರುವುದಿಲ್ಲ. ನಿಪಿ-1 ರ ಕ್ರಯ ಪತ್ರವು ನ್ಯಾಯಾಲಯದ ಮುಖಾಂತರ ಆಗಿರುವ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ವಕೀಲರಾದ ಜಿ ಬಿ ಭಟ್ ರವರು ತಯಾರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರ ಆದ ನಂತರ ನ್ಯಾಯಾಲಯದ ಮುಖಾಂತರವೇ ಒಂದು ತಿದ್ದುಪಡಿ ಪತ್ರ ಆಗಿರುತ್ತದೆ, ಅದರ ಬಗ್ಗೆ ನನಗೆ ತಿಳಿದಿದೆಯಾ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರಿದಿ ಪತ್ರ ಹಾಗೂ ತಿದ್ದುಪಡಿ ಪತ್ರ ನನ್ನ ಬಳಿ ಯಾವಾಗಿನಿಂದ ಇರುತ್ತವೆ ಎಂದರೆ ಸಾಕ್ಷಿ ತನ್ನ ತಂದೆ ಬಳಿ ಸದರಿ ದಾಖಲೆಗಳು ಇದ್ದವು ಹಾಗೂ ಅವು ತನ್ನ ತಂದೆ ಬಳಿ ಯಾವಾಗ ಬಂದಿದ್ದವು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರ ಆಗುವ ಮೊದಲು ಎಷ್ಟು ದಾವೆಗಳು ಇದ್ದವು ಹಾಗೂ ಎಷ್ಟು ದಾವೆಗಳು ಚಾಲ್ತಿಯಲ್ಲಿದ್ದವು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದಾವೆಗಳಲ್ಲಿ ಆರ್ ಎ 219/2008 ರಂತೆ ಇರುವ ದಾವೆಯು ಕೊನೆಯದಾಗಿ ಇತ್ಯರ್ಥವಾಗಿರುತ್ತದೆ ಹಾಗೂ ಅದು ದಿಃ30-08-2016 ರಂದು ಮುಕ್ತಾಯಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಯನ್ನು ಮಾಡಿವಾಳೆ ರವರು ಹೂಡಿದ್ದರು ಹಾಗೂ ಸದರಿ ಮೇಲ್ಮನವಿ ಪ್ರಕರಣಕ್ಕೆ ಇನಾಮದಾರ ಹಾಗೂ ನನ್ನ ತಂದೆಯವರು ಸಹ ಪಕ್ಷಗಾರರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ

ನನ್ನ ತಂದೆ ಹಾಗೂ ಇನಾಮದಾರ ರವರ ಪರವಾಗಿ ವಕೀಲರಾದ ಜಿ ಬಿ ಭಟ್ ರವರು ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ನಿಪಿ-3, ನಿಪಿ-4 ಹಾಗೂ ನಿಡಿ-11 ರ ಕರಾರು ಪತ್ರಗಳು ಆಗುವ ಮೊದಲು ಮೊದಲ ಮಾತುಕತೆ ಎಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ನನ್ನ ತಂದೆಯವರಿಗೆ ತಿಳಿದಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ ಚಾಲ್ತಿಯಲ್ಲಿರುವ ದಾವೆಗಳು ಮುಗಿದ ನಂತರ ಕ್ರಯ ಪತ್ರ ಮಾಡಿಕೊಡಬೇಕೆಂದು ನಿರ್ಧಾರವಾಗಿತ್ತು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ಮತ್ತು ನಿಪಿ-4 ರ ಕರಾರು ಪತ್ರಗಳಿಗೆ ನಾವಿಬ್ಬರೂ ಸೇರಿ ಸ್ವತ್ತುಗಳ ಸರ್ವೆ ಮಾಡಿಸಿಕೊಳ್ಳಬೇಕು ಎಂಬ ಕರಾರು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ ಕರಾರು ಪತ್ರದಲ್ಲಿ ಒಂದು ಗುಂಟೆಗೆ 1,95,000/- ಬೆಲೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-3 ರ ಕರಾರು ಪತ್ರ ಆಗುವ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಆಗುವ ಸಮಯದಲ್ಲಿ ನಾವು ಹಣವನ್ನು ಮೂರು ಜನ ಸಹೋದರರು ಬಂದ್ದಿದರು ಎಂದರೆ ಮೊಹಮ್ಮದ ಪಾಶಾ ಇನಾಮದಾರ ಹಾಗೂ ಸಹೋದರರು ಬಂದಿದ್ದರು ಹಾಗೂ ನಾವು ಅವರಿಗೆ ಹಣವನ್ನು ಕೊಟ್ಟಿರುತ್ತೇವೆ.

3. ಸಾಮಾನ್ಯವಾಗಿ ನ್ಯಾಯಾಲಯದಲ್ಲಿ ಆಸ್ತಿಯ ಕುರಿತು ದಾವೆ ಚಾಲ್ತಿಯಲ್ಲಿರುವಾಗ ಯಾರೂ ಸಹ ಖರೀದಿ ಪತ್ರ ಮಾಡಿಕೊಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕರಾರು ಪತ್ರದಲ್ಲಿ ನಮೂದಾಗಿರುವಂತೆ ಸರ್ವೆ ಕಾರ್ಯ ಮಾಡಿಸಿದ್ದರ ಬಗ್ಗೆ ನಿಪಿ-5 ರ ಖರೀದಿ ಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ನಿಪಿ-5 ರ ಖರೀದಿ ಪತ್ರವನ್ನು ಓದಿ ನೋಡಿರುವುದಿಲ್ಲ. ಸದರಿ ಖರೀದಿ ಪತ್ರದಲ್ಲಿ ಎಷ್ಟು ಮೊತ್ತದ ಬಗ್ಗೆ ನಮೂದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಈಗ ಸದರಿ ಖರೀದಿ ಪತ್ರ ನೋಡುತ್ತಿದ್ದು ಅದರಲ್ಲಿ 3,50,000/- ಹಣ ಎಂದು ನಮೂದು

ಇರುತ್ತದೆ. ಕರಾರು ಪತ್ರದಲಿ 7,80,000/- ಎಂದು ನಮೂದು ಮಾಡಿ ಖರೀದಿ ಪತ್ರದಲ್ಲಿ 3,50,000/- ಎಂದು ನಮೂದು ಮಾಡಿದ್ದು ಏಕೆ ಎಂದರೆ ಸಾಕ್ಷಿ  ಮೊಹಮ್ಮದ ಪಾಶಾ ಇನಾಮದಾರ ಹಾಗೂ ಅವರ ಸಹೋದರರು ತಮ್ಮ ಸಹೋದರಿಯರಿಗೆ ಸದರಿ ಮೊತ್ತದಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಆದ್ದರಿಂದ ಕಡಿಮೆ ಮೊತ್ತ ತೋರಿಸಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.  ಮೊಹಮ್ಮದ ಪಾಶಾ ಇನಾಮದಾರ ಹಾಗೂ ಅವರ ಸಹೋದರರು  ಆ ರೀತಿ ಹೇಳುವಾಗ ನಾನು ಹಾಜರಿದ್ದೆ. ಸದರಿಯವರು ಆ ರೀತಿ 3,50,000/- ಹಣ ತೋರಿಸಬೇಕೆಂದು ನನಗಾಗಲೀ ನನ್ನ ತಂದೆಯವರಿಗಾಗಲೀ ಎಂದಿಗೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ನಾನು ನನ್ನ ಲಿಖಿತ ಹೇಳಿಕೆಯಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.  ಅದನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಅಥವಾ ನನ್ನ ಲಿಖಿತ ಹೇಳಿಕೆಯಲ್ಲಿ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ.  ನಿಪಿ-5 ರ ಖರೀದಿ ಪತ್ರವನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-5 ರ ಖರೀದಿ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನೂ ಸಹ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ನಿಪಿ-5 ನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-5 ನ್ನು ಓರ್ವ ಎಸ್ ಬಿ ಯಡಾಳ ಎಂಬ ವಕೀಲರು ತಯಾರು ಮಾಡಿರುತ್ತಾರೆ ಹಾಗೂ ಅವರು ವಕೀಲರಾದ ಜಿ.ಬಿ.ಭಟ್ ರವರ ಕಚೇರಿಯಲ್ಲಿ ವಕೀಲರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. 7ನೇ ವಾದಿ ಸರ್ಕಾರಿ ನೌಕರರಾಗಿರುತ್ತಾರೆ ಎಂದರೆ ಸರಿ. ಅವರು ಬೆಳಗಾವಿಯ ತಹಶೀಲ್ದಾರ ಕಚೇರಿಯಲ್ಲಿ  FDA ಆಗಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರ ಖರೀದಿ ಪತ್ರ ದಿಃ 15-05-1998 ರಂದು ಆಗಿರುತ್ತದೆ. ಆ ದಿನಾಂಕದಂದು 7ನೇ ವಾದಿ ಅವರ ಸರ್ಕಾರಿ ಕೆಲಸದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರ ಆದ ನಂತರ ಅದನ್ನು

ನಮಗೆ ನೀಡಿರುತ್ತಾರಾ ಅಥವಾ ನೊಂದಣಾಧಿಕಾರಿ ಕಚೇರಿಯವರು Stamp duty ಕಡಿಮೆ ಆದಕಾರಣ ಅದನ್ನು impound ಮಾಡಿದ್ದರಾ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಸರ್ಕಾರದವರು ಎಷ್ಟು ಮೊತ್ತಕ್ಕೆ ಮೌಲ್ಯೀಕರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮೌಲ್ಯ ಮಾಪನ ತಪ್ಪು ಇರುತ್ತದೆ ಎಂದು ನಾವು ಯಾವುದೇ ಮೇಲ್ಮನವಿ ಮಾಡಿರುವುದಿಲ್ಲ. ಸದರಿ ಖರೀದಿ ಪತ್ರವು impound ಆಗಿ ನಂತರ ಎಷ್ಟು ದಿನಗಳ ನಂತರ ಅದನ್ನು ನಮಗೆ ನೋಂದಣಾಧಿಕಾರಿ ಕಚೇರಿಯಿಂದ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಸ್ತಿಯ ಮೇಲೆ ಮೌಲ್ಯಮಾಪನ ಮಾಡಿದ ಪ್ರಕಾರ ನಾವು stamp duty ಕಟ್ಟಿರುತ್ತೀವಾ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ನೊಂದಣಾಧಿಕಾರಿ ಕಚೇರಿಯಿಂದ ನಮಗೆ 5 ವರ್ಷಗಳ ನಂತರ ಕೊಟ್ಟಿರುತ್ತಾರಾ ಅಥವಾ 10 ವರ್ಷಗಳ ನಂತರ ಕೊಟ್ಟಿರುತ್ತಾರಾ ಎಂಬುದು ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ಕುರಿತು ಎಲ್ಲವನ್ನು ಸ್ಪಷ್ಟಪಡಿಸಲು ನಾವು ಪ್ರಯತ್ನ ಪಟ್ಟಿರುವುದಿಲ್ಲ ಏಕೆಂದರೆ ನಮ್ಮ ಉದ್ದೇಶ ಅದನ್ನು ಮುಚ್ಚಿ ಡಬೇಕೆಂದು ಆಗಿತ್ತು ಎಂದರೆ ಸಾಕ್ಷಿ ಅದರ ಬಗ್ಗೆ ತನ್ನ ತಂದೆ ನೋಡಿಕೊಳ್ಳುತ್ತಿದ್ದರು ಅದರ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರ ಮಾಡುವ ಸಮಯದಲ್ಲಿ Urban Land ceiling ಪರವಾನಿಗೆ ಪಡೆದ ಬಗ್ಗೆ ದಾಖಲೆ ಇದೆಯೇ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ನಿಪಿ-5 ರ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ದಾಖಲೆ ಬರೆಯಲು ಎಷ್ಟು ಮೊತ್ತದ ಬಾಂಡ್ ಖರೀದಿಸಿರುತ್ತಾರೆ ಎಂಬುದು ಸಹ ನನಗೆ ಗೊತ್ತಿಲ್ಲ. ನಿಪಿ-5 ರ ದಾಖಲೆಯಲ್ಲಿ ಎಷ್ಟು ಪುಟಗಳು ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಖರೀದಿ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ತಾನು ಸದರಿ ವ್ಯವಹಾರದ ಸಮಯದಲ್ಲಿ ಹಾಜರಿದ್ದೆನು ಆದರೆ ತಮಗೆ ಸದರಿ ದಾಖಲೆಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಖರೀದಿ ಪತ್ರವನ್ನು ನೊಂದಣಾಧಿಕಾರಿ ಕಚೇರಿಯಲ್ಲಿ ಯಾವ ಸಮಯಕ್ಕೆ ನೊಂದಣಿ ಕಾರ್ಯಕ್ಕೆ ಹಾಜರುಪಡಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಿಪಿ-5 ರ

ಖರೀದಿ ಪತ್ರ ಆಗುವ ಕಾಲಕ್ಕೆ ಯಾರು ಹಾಜರಿದ್ದರು ಎಂದರೆ ಮೊಹಮ್ಮದ ಪಾಶಾ ಇನಾಮದಾರ ಹಾಗೂ ಅವರ ಇಬ್ಬರ ಸಹೋದರರು, ನನ್ನ ತಂದೆ, ಇಬ್ಬರು ಸಾಕ್ಷಿದಾರರು, ಒಬ್ಬರು ವಕೀಲರು ಇದ್ದರು. ಆ ಕಾಲಕ್ಕೆ ನಾನೂ ಸಹ ಅಲ್ಲಿ ಹಾಜರಿದ್ದ ಕಾರಣ ಸಹೋದರಿಯರು ಬರೆದುಕೊಟ್ಟ ಜಿಪಿಎ ನೊಂದಾಯಿತ ಜಿಪಿಎ ಆಗಿರುವುದಿಲ್ಲ ಆದ್ದರಿಂದ ಅವರನ್ನೂ ಸಹ ಹಾಜರಿಡಬೇಕು ಎಂದು ನಾನು ಕೇಳಿಕೊಂಡಿರುವುದಿಲ್ಲ. ನಿಪಿ-5 ರ ಖರೀದಿ ಪತ್ರ ನಾವು ಅದನ್ನು ಹಾಜರುಪಡಿಸಿದ ಎಷ್ಟು ಹೊತ್ತಿಗೆ ನೊಂದಣಾಧಿಕಾರಿ ಕಚೇರಿಯಲ್ಲಿ ನೋಂದ ಆಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರ ಆಗುವ ಸಮಯದಲ್ಲಿ ಮೊಹಮ್ಮದ ಪಾಶಾ ಇನಾಮದಾರ ಹಾಗೂ ಅವರ ಸಹೋದರರು ಹಾಜರಿರಲಿಲ್ಲ ಏಕೆಂದರೆ ದಾವೆಗಳು ಚಾಲ್ತಿಯಲ್ಲಿದ್ದವು ಎಂದರೆ ಸರಿಯಲ್ಲ. ನಿಪಿ-5 ರ ದಾಖಲೆ ಆಗಿರುವ ಬಗ್ಗೆ ವಾದಿಯರಿಗೆ ಈ ದಾವೆ ಹಾಕುವ 2 ತಿಂಗಳ ಹಿಂದೆ ಅಷ್ಟೆ ತಿಳಿದಿತ್ತು ಹಾಗೂ ಅದಕ್ಕೂ ಮೊದಲು ಅವರಿಗೆ ಅದರ ಬಗ್ಗೆ ತಿಳಿದೇ ಇರಲಿಲ್ಲ ಏಕೆಂದರೆ ನಾವು ಅವರಿಂದ ಮುಚ್ಚಿಟ್ಟಿದ್ದೆವು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-5 ರ ದಾಖಲೆಯ ಬಗ್ಗೆ ನಾವು ವಾದಿಯರಿಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ವಾದಿಯರೇ ಅದನ್ನು ನೊಂದಣಾಧಿಕಾರಿ ಕಚೇರಿಯಲ್ಲಿ ನೋಂದ ಮಾಡಿ ಹೋಗಿರುತ್ತಾರೆ ಆದ್ದರಿಂದ ಅವರಿಗೆ ಹೇಳುವ ಪ್ರಶ್ನೇಯೇ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ಕರಾರಿನ ಪ್ರಕಾರ ವಾದಿಯರಿಗೆ ಗುಂಟೆಗೆ 1,95,000/- ರೂ.ಗಳಂತೆ ಹಣವನ್ನು ಕೊಡದೆ ಇರುವ ಕಾರಣ ನಾವು ಖರೀದಿ ಪತ್ರದ ವಿಚಾರವನ್ನು ಅವರಿಂದ ಮುಚ್ಚಿ ಟ್ಟಿರುತ್ತೇವೆ ಎಂದರೆ ಸಾಕ್ಷಿ ನಾಲ್ಕು ಗುಂಟೆ ಜಾಗ ಮಾತ್ರ ಇದ್ದುದ್ದರಿಂದ ಒಂದು ಗುಂಟೆಗೆ 1,95,000/- ರೂ.ಗಳಂತೆ ನಾಲ್ಕು ಗುಂಟೆಗೆ 7,80,000/- ಹಣವನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ. ನಿಪಿ-5 ಖರೀದಿ ಪತ್ರದಲ್ಲಿ ಮೊದಲು ಆದ ಕರಾರು ಪತ್ರದ ಬಗ್ಗೆ ಹಾಗೂ ಅದರ ದಿನಾಂಕದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸ್ವತ್ತಿನ ಮಾಲೀಕರು ಅದರ ಕುರಿತು ನಮೂದು ಮಾಡಬಾರದು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಮಾಲೀಕರು ಹೇಳಿದ್ದರು ಎಂಬ ಬಗ್ಗೆ ನನ್ನ ಬಳಿ ಲಿಖಿತ ದಾಖಲೆ

ಇರುವುದಿಲ್ಲ. ನಿಪಿ-5 ರ ಖರೀದಿ ಪತ್ರ ಆಗಿರುತ್ತದೆ ಎಂದು ಹೇಳಲಾದ ದಿನದಂದು ಮೊಹಮ್ಮದ ಪಾಶಾ ಇನಾಮದಾರ ಹಾಗೂ ಅವರ ಸಹೋದರರು ಬಂದೇ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರ ಆಗುವ ಕಾಲಕ್ಕೆ ಅವರು ಇರಲೇ ಇಲ್ಲ ಏಕೆಂದರೆ ದಾವೆಗಳು ಚಾಲ್ತಿಯಲ್ಲಿದರು ಆದ್ದರಿಂದ ನಾವು ಬೇರೆ ವ್ಯಕ್ತಿಗಳನ್ನು ನಿಲ್ಲಿಸಿ ಖರೀದಿ ಪತ್ರ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**